**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ಸಿ ಸಿ ಸಂಃ 150/2022**

| | | |
|---|---|---|
| ಸಾಕ್ಷಿಯ ಹೆಸರುಃ | ರವಿ | ಪ್ರಾಸಾಃಃ 10 |
| ತಂದೆಯ ಹೆಸರುಃ | ಅಣ್ಣೇಗೌಡ | ಚಾಸಾಃಃ 9 |
| ವಯಸ್ಸುಃ | 50 ವರ್ಷ | ಪ್ರಮಾಣೀಕರಿಸಿದ ದಿಃ 23/02/2026 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ತೆಲಗಿನ ಕೊಪ್ಪಲು ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು. | |

<u>**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**</u>

ನನಗೆ ಚಾಸಾ-1 ಗೊತ್ತು. ನನಗೆ ಆರೋಪಿತರ ಪರಿಚಯ ಇಲ್ಲ. ನಾನು ನ್ನ ಅತ್ತಿಗೆ ಮನೆಗೆ ಹೋದಾಗ ಗಲಾಟೆ ವಿಚಾರವಾಗಿ ಪೋಲೀಸರು ನನ್ನ ಸಹಿ ಪಡೆದರು, ಸಾಕ್ಷಿಯು ನಿಪಿ-2 ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಡಿ)** ಎಂದು ಗುರುತಿಸಲಾಯಿತು. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

<u>**ಪಾಟೀ ಸವಾಲುಃ ಸಸಅ ರವರಿಂದಃ**</u>

ದಿಃ 17.01.2022 ರಂದು ಪೋಲೀಸರು ಮಹಜರು ಕ್ರಮ ಜರುಗಿಸಿದರು ಎಂದರೆ ನನಗೆ ಗೊತ್ತಿಲ್ಲ. ಅಂಬಲಾರೆ ಮತ್ತು ಚನ್ನಕೇಶವ ಪುರ ಗ್ರಾಮಗಳ ಮುಖ್ಯ ರಸ್ತೆಯಲ್ಲಿ ಮಹಜರು ಮಾಡಿದರು ಎಂದರೆ ಸರಿ. ಆ ಸಮಯದಲ್ಲಿ ಚಾಸಾ-1 ರವರು

ಸ್ಥಳದಲ್ಲಿ ಇದ್ದರು ಎಂದರೆ ನಾನು ಗಮನಿಸಿಲ್ಲ. ಅವರು ತೋರಿಸಿಕೊಟ್ಟ ಮೇರೆಗೆ ಪೋಲೀಸರು ಸ್ಥಳ ದಲ್ಲಿ ಬರವಣಿಗೆ ಮಾಡಿದರು ಎಂದರೆ ಸರಿ. ಆ ಸಮಯದಲ್ಲಿ ಚಾಸ–8 ರವರು ಸಹ ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿ. ಮಹಜರನ್ನು ಸಂಜೆ 4.30 ರಿಂದ 5.30 ರವರೆಗೆ ಬರೆದರು ಎಂದರೆ ಗೊತ್ತಿಲ್ಲ. ಚಾಸಾ–1 ರವರು ಸ್ಥಳದಲ್ಲಿ ಒಂದು ಕಾಡು ಜಾತಿಯ ಮರದ ದೊಣ್ಣೆಯನ್ನು ಪೋಲೀಸರಿಗೆ ನೀಡಿದರು ಎಂದರೆ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಮಹಜರು ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ** ಶ್ರೀ ಹೆಚ್ ಸಿ ಪಿ **ವಕೀಲರಿಂದಃ**

ಮಹಜರು ಮಾಡಿದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಮಹಜರು ಸಮಯದಲ್ಲಿ ಯಾರು ಯಾರು ಇದ್ದರು ಎಂದು ಗೊತ್ತಿಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**